ೀಲಕ್ ಂಠಪ್ಪನವರದ್ದು ಇನ್ನೂ ಅನೇಕ ಸದಸ್ಯರದು ಇರಬಹುದು. 18 ಕಡೆ ನಮಗೆ ಕಟ್ಟಡಗಳ್ ಇಲ್ಲದಿರತಕ್ಕಂಥದ್ದು, ಮತ್ತು ಕನ್‌ಸ್ಟ್ರಕ್ಷನ್ಸ್ ಆಗುತ್ತಿರುವಂಥದ್ದು ಕೂಡ ಹಣವಿಲ್ಲದೆ ೀದು ಅರ್ಧಕ್ಕೆ ಅಲ್ಲಿಯೇ ನಿಂತಿರುತ್ತದೆ. ಅಂಥದ್ದು ಕೂಡ ಸುಮಾರು 19 ಕಡೆ ನಡೆಯುತ್ತಿದೆ. ಇದರ ಜೊತೆಗೆ ಇನ್ನು ಅಡಿಷನಲ್ ಹೆಚ್ಚುವರಿ ವಿದ್ಯಾರ್ಥಿಗಳಿದ್ದಾರೆ, ಅವರಿಗೆ ಅಡಿಷನಲ್ ಕೊಠಡಿಗಳು ಬೇಕೆಂದು ಬೇಡಿಕೆ ಇರುವಂಥದ್ದು ಕೇವಲ 23 ಕಡೆ ಕಾಲೇಜುಗಳಲ್ಲಿ ಇದೆ. ಇವೆಲ್ಲದರ ಬಗ್ಗೆಯೂ ಕೂಡ ಸರ್ಕಾರ ಇದು ಬಹಳ ವಿವಸಗಳಿಂದಲೂ ಕೂಡ ಈ ಸಮಸ್ಯೆಗಳು ಇರುತ್ತದೆ. ಈ ಬಗ್ಗೆ ಮಾನ್ಯ ಬಿನ್ನಿಕೋಡ್‌ರವರು ಹೇಳಿದ ಾಗೆ 19 ವರ್ಷದಿಂದ ಅವರ ಕಾಲೇಜಿನಲ್ಲಿಯೇ ಕಟ್ಟಡವಿಲ್ಲವೆಂದು ಹೇಳಿದ್ದಾರೆ. ಇದರ ಕಡೆಗೆ ನಾವು ಗಮನವನ್ನು ಹರಿಸಿದ್ದೇವೆ, ಇದರ ಬಗ್ಗೆ ತಾವು ಯೋಚನೆಯನ್ನು ಮಾಡಬೇಕಾಗುತ್ತದೆ. ಇವತ್ತು ಆಕಡೆ ಗಮನ ಹರಿಸಿ ಎಲ್ಲಾದರೂ ಹಣವನ್ನು ತಂದು ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ನಾವು ಹುಡ್ಕೋ ನೆರವಿಗೆ ಹೋಗಿ ಇವತ್ತಿನದಿವಸ 18 ಕೋಟಿ ರೂಪಾಯಿಗಳನ್ನು 71 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುವ ಬಗ್ಗೆ ತೀರ್ಮಾನವನ್ನು ಮಾಡಿ, ಸಂಪುಟದಲ್ಲಿಯೂ ಕೂಡ ತೀರ್ಮಾನವಾಗಿ ಅದಕ್ಕೆ ನಾವು ಗ್ಯಾರಂಟಿಯನ್ನು ಕೊಟ್ಟು ಈಗ ಅಂತಿಮ ಹಂತದಲ್ಲಿ ಹಣವನ್ನು ಬಿಡುಗಡೆ ಮಾಡುವ ಹಂತದಲ್ಲಿದ್ದೇವೆ, ಅದಕ್ಕಾಗಿ ಕೆಲವೊಂದು ಪ್ರೊಸೀಜರ್‌ಗಳಲ್ಲಿ ಡಿಲೇ ಆಗತಕ್ಕಂಥದ್ದು ಬಿಟ್ಟರೆ ಸದ್ಯದಲ್ಲೇ ಹಣವು ಬಂದ ತಕ್ಷಣ ಬಹುಶಃ ಜೂನ್-ಜುಲೈನ ಹೊತ್ತಿಗೆ ನಾನು ಎಲ್ಲಾ ಕಾಲೇಜುಗಳಿಗೆ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡುವ ಕೆಲಸವನ್ನು ಮಾಡಬಹುದು.

ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರ ಅಧಿಕಾರಾವಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 93(1513)

ಸದಸ್ಯರ ಹೆಸರು: ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ)

ಉತ್ತರಿಸುವವರು: ಶ್ರೀ ಎಂ.ವೈ.ಘೋರ್ಪಡೆ(ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

ಪ್ರಶ್ನೆ

1. ಕರ್ನಾಟಕ ಆಡಳಿತ ಸುಧಾರಣಾ ಆಯೋಗವು ಶಿಫಾರಸ್ಸು ಮಾಡಿರುವಂತೆ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ : ಉಪಾಧ್ಯಕ್ಷರ ಅಧಿಕಾರಾವಧಿಯನ್ನು ಈಗಿರುವ 20 ತಿಂಗಳುಗಳಿಂದ 30 ತಿಂಗಳಿಗೆ ಹೆಚ್ಚಿಸಲು ಸರ್ಕಾರದ ಸಮ್ಮತಿ ಇದೆಯೇ?

2. ಹಾಗಿದ್ದಲ್ಲಿ, ಹಾಲಿ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷ : ಉಪಾಧ್ಯಕ್ಷರ ಅಧಿಕಾರಾವಧಿ ಫೆಬ್ರವರಿ ೨೦೦೨ರ ಮಾಹೆಯಲ್ಲಿ ಅಂತ್ಯಗೊಳ್ಳುವ ಹಿನ್ನೆಲೆಯಲ್ಲಿ ಈ ಸಂಬಂಧ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ಕ್ಕೆ ಸೂಕ್ತ ತಿದ್ದುಪಡಿ ತರಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?

3. ದೇಶದ ಇತರ ರಾಜ್ಯಗಳಲ್ಲಿ ಇರುವಂತೆ ಕರ್ನಾಟಕದಲ್ಲಿಯೂ ಪಂಚಾಯತ್ ರಾಜ್ ಸಂಸ್ಥೆಗಳ (ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಅಧಿಕಾರಾವಧಿಯನ್ನು ಪೂರ್ಣ ಐದು ವರ್ಷಗಳಿಗೆ ಹೆಚ್ಚಿಸುವ ಬಗ್ಗೆ ಸರ್ಕಾರದ ನಿಲುವೇನು?

ಉತ್ತರ

1. ಇಲ್ಲ.

2. ಉದ್ಭವಿಸುವುದಿಲ್ಲ.

3. ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳ ಅವಧಿಯನ್ನು 20 ತಿಂಗಳುಗಳಿಂದ 30 ತಿಂಗಳಿಗೆ ಹೆಚ್ಚಿಸಬೇಕೆಂದು ನಮ್ಮ ಕರ್ನಾಟಕದ ಈ ಹೊಸ ಸರ್ಕಾರದವರು ರಚನೆ ಮಾಡಿದಂಥ ಆಡಳಿತ ಸುಧಾರಣಾ ಆಯೋಗ ಇವುಗಳ ಅವಧಿಯನ್ನು ಇದಕ್ಕೆ ಹೆಚ್ಚಿಸಬೇಕೆಂದು ಶಿಫಾರಸ್ಸನ್ನು ಮಾಡಿದೆ. ತಮಗೆ ತಿಳಿದಿರುವ ಹಾಗೆ ಈ ಶಿಫಾರಸ್ಸು ನಮ್ಮ ಅಭಿಪ್ರಾಯದಲ್ಲಿ ಸರಿಯಾಗಿದೆ. ಆಡಳಿತ ಸುಧಾರಣೆ ಆಯೋಗ ಮಾಡಿರತಕ್ಕಂಥ ಅನೇಕ ಶಿಫಾರಸ್ಸುಗಳಲ್ಲಿ ಇದೊಂದು ಒಳ್ಳೆಯ ಉಪಯುಕ್ತವಾದ ಶಿಫಾರಸ್ಸು ಆಗಿದೆ. ಇದನ್ನು ಕಾರ್ಯಗತ ಮಾಡುವುದಕ್ಕೆ ಸರ್ಕಾರಕ್ಕೆ ಅಡಚಣೆಗಳು ಏನು ಎನ್ನುವುದರ ಬಗ್ಗೆ ನಮಗೆ ಅರ್ಥವಾಗುತ್ತಿಲ್ಲ ಇದು ಮೊದಲನೆಯದು. ಎರಡನೆಯದು, ಇವತ್ತು ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ ವ್ಯವಸ್ಥೆ ಬಹಳ ಗೋಜಲು ಮತ್ತು ಗೊಂದಲವಾಗಿರತಕ್ಕಂಥದ್ದು ತಮಗೆ ಗೊತ್ತಿದೆ. ಮೆಂಬರ್‌ಗಳನ್ನು ಕಿಡ್ನಾಪ್ ಮಾಡಿಕೊಂಡು ಹೋಗುವಂಥದ್ದು ಆಡಳಿತ ಪಕ್ಷದಲ್ಲಿ ಎರಡು-ಮೂರು ಗುಂಪುಗಳನ್ನು ಮಾಡಿಕೊಂಡು, ನಾವು ಆ ಕಡೆ ಇದ್ದಾಗ ನೀವು ಈ ಕಡೆಗೆ ಇದ್ದಾಗ ಆಗಿದೆ ಇದೇನೂ ಹೊಸದೇನಲ್ಲ. ಮಂಡ್ಯದಲ್ಲಿ ನಿಮ್ಮ ಅಧಿಕೃತ ಅಭ್ಯರ್ಥಿಯನ್ನು ಕಳುಹಿಸಿದ್ದರು ಅವರು ತಮ್ಮ ನಾಮ ಪತ್ರವನ್ನು ವಾಪಸು ತೆಗೆದುಕೊಳ್ಳದೆ, ಅಲ್ಲಿ ಬೇರೆಯವರನ್ನು ಮಾಡಿದರು. ಇವು ಆಗುತ್ತವೆ, ಇವು ಸರ್ವೆ ಸಾಮಾನ್ಯವಾಗಿವೆ. 6 ತಿಂಗಳು ಹಾಗೂ 3 ತಿಂಗಳಿಗೆ ಹಂಚಿಸಿಕೊಳ್ಳುವ ಪರಿಸ್ಥಿತಿ

ಬಂದಿದೆ. ಹೀಗಾಗಿ ಯಾವ ಘನ ಉದ್ದೇಶದಿಂದ ಅಧಿಕಾರದ ವಿಕೇಂದ್ರೀಕರಣ ಆಗಬೇಕೆನ್ನುವ ಉದ್ದೇಶದಿಂದ ತಾವು ಮಸೂದೆಯನ್ನು ತಂದು ತಿದ್ದುಪಡಿ ಮಾಡುವುದಕ್ಕೆ ಪ್ರಯತ್ನವನ್ನು ಮಾಡಿದಿರಿ ಆ ಒಂದು ಉದ್ದೇಶವನ್ನು ಈಡೇರಿಸುವುದಕ್ಕೆ ಆಗುತ್ತಿಲ್ಲ. ಬ್ಯುರೋಕ್ರಸಿ ಎಂದರೆ, ಅಲ್ಲಿ ನಡೆಸತಕ್ಕಂಥ ಸಿಇಒ, ಚೀಫ್ ಅಕೌಂಟ್ಸ್ ಆಫೀಸರ್ ಮತ್ತು ಪ್ಲಾನಿಂಗ್ ಆಫೀಸರ್ ಅವರ ಕೈಯಲ್ಲಿ ಅಧಿಕಾರ ಇದೆಯೇ ಹೊರತು ಅಲ್ಲಿರತಕ್ಕಂಥ ಅಧ್ಯಕ್ಷ ಅಥವಾ ಉಪಾಧ್ಯಕ್ಷರಿಗೆ ಅಧಿಕಾರ ಉಳಿಯಲಿಲ್ಲ. ಅದಕ್ಕೋಸ್ಕರ ಕೊನೆಯ ಪಕ್ಷ ಇದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಭರವಸೆಯನ್ನು ಕೊಡುವುದಕ್ಕೆ ನಿಮಗೆ ತೊಂದರೆ ಏನು? ಅಂದರೆ ಈಗ ಇರುವ ವ್ಯವಸ್ಥೆ ಸರಿ ಇದೆಯೇ ಎನ್ನುವುದಾಗಿದೆಯೇ ನಿಮ್ಮ ಅಭಿಪ್ರಾಯ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವ ಹಾಗೆ ಈ 5 ವರ್ಷದ ಅವಧಿಯನ್ನು ನಮ್ಮ ಕಾನೂನಿನಲ್ಲಿ ಇದನ್ನು 1993ರಲ್ಲಿ ಸೇರಿಸಲಾಗಿದೆ, ಆದರೆ ಇದನ್ನು ನಾವು ಮಾಡಿದ್ದು ಅಲ್ಲ, ಇದನ್ನು ೧೯೯೩-೯೬ರ ಆಕ್ಟ್‌ನಲ್ಲಿ 5 ವರ್ಷವೆಂದು ಇಡೆ. ಅದರ ಮುಂಚೆ ಇರುವ ತಮ್ಮ ಆಕ್ಟ್‌ನಲ್ಲಿ ೫ ವರ್ಷವೆಂದು ಇದೆ. ದಿನಾಂಕ:23-9-96ರಲ್ಲಿ ತಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ, ಅದು ಯಾವ ಕಾರಣಕ್ಕಾಗಿ ಎನ್ನುವುದು ನನಗೆ ಗೊತ್ತಿಲ್ಲ. ಅದು ತಮಗೆ ಗೊತ್ತಿರಬಹುದು. ಅದನ್ನು 20 ತಿಂಗಳಿಗೆ ಇಳಿಸಿದಿರಿ. ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ 5 ವರ್ಷದ ಟರ್ಮ್ ಇದ್ದದ್ದು ಕೈಬಿಟ್ಟು 20 ತಿಂಗಳು ಇರಬೇಕೆಂದು ಮಾಡಿದಿರಿ. ಈಗ ಆಡಳಿತ ಸುಧಾರಣಾ ಆಯೋಗದವರು ಇದರ ಬಗ್ಗೆ ಶಿಫಾರಸ್ಸು ಮಾಡಿದ್ದು ತಮಗೆ ಗೊತ್ತಿದೆ. ಅವರು ಹೇಳಿದ್ದಾರೆ, 20 ತಿಂಗಳು ಬಹಳ ಕಡಿಮೆಯಾಗುತ್ತದೆ 30 ತಿಂಗಳು ಇದ್ದರೆ ಒಳ್ಳೆಯದು ಎಂದು ಶಿಫಾರಸ್ಸು ಮಾಡಿದ್ದಾರೆ. ಏಕೆಂದರೆ ಈ ಎಲೆಕ್ಟೆಡ್ ಮೆಂಬರ್ಸ್ ಸಾಕಷ್ಟು ಅನುಭವವನ್ನು ತೆಗೆದುಕೊಳ್ಳಬೇಕಾದರೆ 20 ತಿಂಗಳು ಇದ್ದರೆ ಬಹಳ ಕಷ್ಟವಾಗುತ್ತದೆ, ಆ ಕಾರಣದಿಂದಾಗಿ ಅವರ ಸ್ಥಾನಮಾನವನ್ನು ಬಲಪಡಿಸಬೇಕಾದರೆ 30 ತಿಂಗಳು ಇರಬೇಕೆಂದು ಅವರು ಶಿಫಾರಸ್ಸು ಮಾಡಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ನಾವು ಗ್ರಾಮ ಪಂಚಾಯಿತಿ ಚುನಾವಣೆಗಳನ್ನು ಮಾಡಿರುತ್ತೇವೆ, ನಾವು ಗ್ರಾಮ ಪಂಚಾಯಿತಿಗೆ 30 ತಿಂಗಳು ಎಂದು ಮಾಡಿರುತ್ತೇವೆ. ಏಕೆಂದರೆ 30 ತಿಂಗಳು ಮಾಡುವುದಕ್ಕೆ ಆಗ ನಮಗೆ ಅವಕಾಶ ಇತ್ತು. ಈಗ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಯ 20 ತಿಂಗಳು ಇದ್ದದ್ದನ್ನು 30 ತಿಂಗಳು ಮಾಡಬೇಕು ಅಥವಾ 5 ವರ್ಷ ಮಾಡಬೇಕು. ಈ ಪ್ರಶ್ನೆಯ ಬಗ್ಗೆ ಕೇಂದ್ರ ಸರ್ಕಾರವನ್ನು ಕೇಳಿದರೆ ಅವರು 5 ವರ್ಷ ಇರಲಿ ಎಂದು ಹೇಳಿದ್ದಾರೆ. 1993ರ ಆಕ್ಟ್ ಮಾಡುವಾಗ ನಾವು 5 ವರ್ಷವೆಂದು ಮಾಡಿದ್ದೇವೆ. ಏನೋ ಗೊತ್ತಿಲ್ಲ ಆ ಕಾಲಕ್ಕೆ ಮಾಡಿದ್ದಾರೆ. ಈಗ ಅದನ್ನು ಬದಲಾಯಿಸಬೇಕಾದರೆ ಎಲ್ಲರೂ ಒಂದು ಒಮ್ಮತಕ್ಕೆ ಬಂದರೆ ನನ್ನ ಆಕ್ಷೇಪಣೆ ಏನು ಇಲ್ಲ. ನನ್ನ ವೈಯಕ್ತಿಕ ಅಭಿಪ್ರಾಯವನ್ನು ನಾನು ಎಷ್ಟೋ ಸಲ ಹೇಳಿದ್ದೇನೆ. ಜಿಲ್ಲಾ

ಪಂಚಾಯತ್ ಅಧ್ಯಕ್ಷರ ಅವಧಿ 30 ತಿಂಗಳಾದರೂ ಒಳ್ಳೆಯದು ಎಂದು ನಾನು ಹೇಳಿದ್ದೇನೆ. ಆಡಳಿತ ಸುಧಾರಣಾ ಆಯೋಗ ಏನು ಅಭಿಪ್ರಾಯವನ್ನು ಕೊಟ್ಟಿದ್ದಾರೆ ಅದೇ ನನ್ನ ವೈಯಕ್ತಿಕ ಅಭಿಪ್ರಾಯವೆಂದು ಇಟ್ಟುಕೊಳ್ಳಬಹುದು. ಅದಕ್ಕಿಂತ ಒಂದು ಹೆಜ್ಜೆ ಮುಂದೆ ಹೋಗಿ 5 ವರ್ಷ ಮಾಡೋಣವೆಂದು ನಿಮ್ಮ ಅಭಿಪ್ರಾಯವಾದರೆ ಅದಕ್ಕೂ ಕೂಡ ನಾನು ಅಡ್ಡ ಬರುವುದಿಲ್ಲ. ಆದರೆ ನಾವು ರಾಜಕೀಯವಾಗಿ ಬಳಸುವುದು ಸರಿಯಲ್ಲವೆಂದು ನನಗನ್ನಿಸುತ್ತದೆ. ಎಲ್ಲಾ ರಾಜಕೀಯ ಪಕ್ಷಗಳು ಇದರ ಬಗ್ಗೆ ನಿರ್ಧಾರಕ್ಕೆ ಬರುವುದಾದರೆ ನಾನು ಅದರ ಪ್ರಕಾರ ಅಮೆಂಡ್‌ಮೆಂಟ್‌ನ್ನು ಈ ಸಭೆಯ ಮುಂದೆ ತರುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಮುಖ್ಯ ಮಂತ್ರಿಗಳ Openness ಅನ್ನು ಅಪ್ರೀಷಿಯೇಟ್ ಮಾಡುತ್ತೇನೆ. ಸಾರಿ, ದಯವಿಟ್ಟು ಕ್ಷಮಿಸಬೇಕು, ಮಾನ್ಯ ಮಂತ್ರಿಗಳ ಅಭಿಪ್ರಾಯವನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರ ನಿಗಾ ಮಾನ್ಯ ಮುಖ್ಯಮಂತ್ರಿಗಳ ಮೇಲೆಯೇ ಇದೆ. ಈ ಕಡೆಗೆ ಅವರ ಕಣ್ಣು ಜಾಸ್ತಿ ಇದೆ, ಬೇರೆ ಕಡೆ ಇಲ್ಲ. ಅದಕ್ಕೆ ಅದೇ ಹೇಳುತ್ತಾರೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಅದೇನು ತಪ್ಪೇನೂ ಅಲ್ಲ, ಆ ಸ್ಥಾನಕ್ಕೆ ನಿಗಾ ಇರುವವರು ಆಗಬಹುದಲ್ಲವೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಮಾಡಬೇಕಲ್ಲಾ, ಯಾಕೆ ಆಗಬೇಕೆಂದು ಹೇಳಿ ಯಾರದ್ದೂ ಅಬ್ಜಕ್ಷನ್ಸ್ ಇಲ್ಲ. ನಿಮ್ಮದು ಟರ್ಮ್ ಬಂದಾಗ ಅದು ಆಗಬೇಕಲ್ಲಾ, ಅದು ಯಾವಾಗಲೂ ಆಗಬೇಕಲ್ಲಾ, ಮತ್ತೆ ಉಲ್ಟಾ ಹೀಗೆ ಆಗುತ್ತದೆ.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಏನೇನು ಆಗುತ್ತದೆಂಬ ಬಗ್ಗೆ ತಾವು ಕಾದು ನೋಡಬಹುದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ನಾನು ಈ ಸಂದರ್ಭದಲ್ಲಿ ಎರಡು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಅಧ್ಯಕ್ಷರ ಅವಧಿಯನ್ನು 30 ತಿಂಗಳು ಮಾಡುವುದು ಒಂದಾದರೆ, ಮತ್ತೊಂದು ಆಡಳಿತ ಸುಧಾರಣಾ ಆಯೋಗ ವರದಿ. ತಮಗೆ ಗೊತ್ತಿರುವಹಾಗೆ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಸ್ಥಾನವನ್ನು ಆಂಧ್ರಪ್ರದೇಶದಲ್ಲಿ ನೇರವಾಗಿ ಚುನಾವಣೆಯನ್ನು ಮಾಡತಕ್ಕಂಥ ಒಂದು ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಅದರ ಬಗ್ಗೆ ನನಗನ್ನಿಸತಕ್ಕಂಥದ್ದು ಈಗ ಇರುವ ಪದ್ಧತಿಗಿಂತ ಉತ್ತಮವಾದ ಪದ್ಧತಿಯಾಗಿದೆ. ನಿಮಗೆ ಹೇಳಬೇಕೆಂದರೆ, ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ಒಂದು ಉತ್ತರವನ್ನು ಕೊಟ್ಟಿದ್ದಾರೆ, ಬೋರ್‌ವೆಲ್‌ನ್ನು

ತೋಡಿಸಬೇಕೆಂದು ಹೇಳಿದರೆ ಸ್ಟಾಂಪ್ ಡ್ಯೂಟಿಯನ್ನು ತಾಲ್ಲೂಕು ಪಂಚಾಯಿತಿಯವರಿಗೆ ಹಣವನ್ನು ಕೊಟ್ಟಿದ್ದೇವೆ ಅವರು ತೋಡಿಸುತ್ತಾರೆಂದು ಹೇಳಿದರು. ಆ ತಾಲ್ಲೂಕು ಪಂಚಿಯಿತಿಯ ಸದಸ್ಯರು ಏನು ಮಾಡುತ್ತಾರೆಂದರೆ ಅವರಿಗೆ ಸ್ಟಾಂಪ್‌ಡ್ಯೂಟಿಯಲ್ಲಿ ಎಂಟೈರ್ ತಾಲ್ಲೂಕು ಪಂಚಾಯಿತಿಗೆ 4 ರಿಂದ 5 ಲಕ್ಷ ರೂ.ಗಳು ಬರುತ್ತದೆ. ಅದರಲ್ಲಿ 30 ರಿಂದ 40 ಸಾವಿರ ರೂಪಾಯಿಗಳನ್ನು ಹಂಚಿಕೊಂಡು ಬಿಟ್ಟಿರುತ್ತಾರೆ. ಜ್ಯೂನಿಯರ್ ಇಂಜಿನಿಯರ್‌ಗಳು ಮತ್ತು ಪಂಚಾಯಿತಿ ಕಾರ್ಯದರ್ಶಿಯವರು ಹೊಂದಾಣಿಕೆಯನ್ನು ಮಾಡಿಕೊಂಡ ಅವರು ಅದರಲ್ಲಿ 15 ಸಾವಿರ ರೂಪಾಯಿಗಳ ಕೆಲಸವನ್ನು ಮಾಡಿ ಸುಮಾರು 40 ಸಾವಿರ ರೂಪಾಯಿಗಳ ಬಿಲ್‌ನ್ನು ಮಾಡಿಕೊಂಡಿರುತ್ತಾರೆ. ಇನ್ನು ಗಂಗಾಧರಪ್ಪನವರ ಸುತ್ತೋಲೆಯನ್ನು ತೆಗೆದುಕೊಂಡು ಬೋರ್‌ವೆಲ್‌ನ್ನು ತೋಡುವ ಪ್ರಶ್ನೆ ಎಲ್ಲಿ ಬರುತ್ತದೆ? ಇವೆಲ್ಲವೂ ಬೋಗಸ್ ಎನ್ನುವುದಕ್ಕೆ ಇದೊಂದು ಉದಾಹರಣೆಯನ್ನು ಕೊಟ್ಟಿದ್ದೇನೆ. ಈ ಬಗ್ಗೆ ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುವುದೇನೆಂದರೆ, ಈ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳು ಗೋಜಲು ಮತ್ತು ಗೊಂದಲಗಳು ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದೇನೆ. ತಾವು ಏನು ಘನ ಉದ್ದೇಶವನ್ನು ಇಟ್ಟುಕೊಂಡು ಮಾಡಿದ್ದೀರಿ ಅದು ಸಂಪೂರ್ಣವಾಗಿ ನಮ್ಮಲ್ಲಿ ಪೊಲಿಟಿಕಲ್ ಮೆಚ್ಯೂರಿಟಿ ನಮ್ಮಲ್ಲಿ ಬಂದಿಲ್ಲ. I also appreciate on this issue. All political parties should come to some conclusion. ನೀವು ಸಭೆಯನ್ನು ಕರೆಯಿರಿ, ಅಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ನೀವು ಕರ್ನಾಟಕದಲ್ಲಿ ಪ್ರಾರಂಭ ಮಾಡಿ ನೀವು ಸಭೆಯನ್ನು ಕರೆಯತಕ್ಕಂಥ ಭರವಸೆಯನ್ನು ಕೊಡಿ We shall have a debate, ಓಪನ್ ಡಿಬೇಟನ್ನು ನಾವು ಮಾಡೋಣ. If consensus emerges, at least, in Karnataka we will do it, on this issue itself.

MR.SPEAKER: Some discussion about this.

ಶ್ರೀ ಎಂ.ವೈ.ಘೋರ್ಪಡೆ: ಇದರಲ್ಲಿ ನನ್ನದೇನೂ ಆಕ್ಷೇಪಣೆ ಇಲ್ಲ, ಇದರಲ್ಲಿ ಬೇರೆ ವಿಷಯವನ್ನು ಡೈರೆಕ್ಟ್ ಎಲೆಕ್ಷನ್ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಆ ವಿಷಯವೇ ಬೇರೆ, ಡೈರೆಕ್ಟ್ ಎಲೆಕ್ಷನ್ ಆಗಬೇಕು, ಇನ್‌ಡೈರೆಕ್ಟ್ ಎಲೆಕ್ಷನ್ ಆಗಬೇಕು ಇದರ ಬಗ್ಗೆ ನಾವು ಕಾನೂನು ಮಾಡುವಾಗ ಇದರ ಬಗ್ಗೆ ಸಾಕಷ್ಟು ಚರ್ಚೆ ಇಲ್ಲಿ ನಡೆಯಿತು. ಆ ಚರ್ಚೆಯಲ್ಲಿ ಬಂದಿರತಕ್ಕಂಥ ಅಭಿಪ್ರಾಯವೇನೆಂದರೆ, ಇನ್‌ಡೈರೆಕ್ಟ್ ಎಲೆಕ್ಷನ್‌ನಿಂದ ಸಮಾಜದಲ್ಲಿ ಕೆಳಗಿರತಕ್ಕಂತಹ ಜನರು ಏನಿದ್ದಾರೆ ಅವರಿಗೆ ಸಾಕಷ್ಟು ಮನ್ನಣೆ ಸಿಗುತ್ತದೆ, ಏಕೆಂದರೆ ಅವರ ಅನುಮತಿಯಿಂದ ಅಧ್ಯಕ್ಷರಾಗಿರುತ್ತಾರೆ. ನೇರವಾಗಿ ನಾವು ಚುನಾವಣೆಯನ್ನು ಮಾಡಿದರೆ ಅಧ್ಯಕ್ಷರು ಈ ಸದಸ್ಯರ ಕಡೆ ಲಕ್ಷ್ಯ ಕೊಡಬೇಕಾಗಿಲ್ಲ, ಇದರಲ್ಲಿ ಯಾರು ಬಲಿಷ್ಠರಾಗಿರುತ್ತಾರೆ, ಎಲ್ಲಾ ದೃಷ್ಟಿಯಿಂದ ಹಣವಂತರಿರುತ್ತಾರೆ

ಅವರುಗಳು ಆರಿಸಿ ಬರುವ ಸಾಧ್ಯತೆ ಜಾಸ್ತಿ ಇರುವುದರಿಂದ ಇನ್‌ಡೈರೆಕ್ಟ್ ಅಂದರೆ ಆರಿಸಿ ಬರುವ ಸದಸ್ಯರು ಅಧ್ಯಕ್ಷರನ್ನು ಆರಿಸುವುದು ಒಳ್ಳೆಯದು.

ಶ್ರೀ ಪಿ.ಜಿ.ಆರ್.ಸಿಂಧ್ಯ: ಆಂಧ್ರಪ್ರದೇಶದಲ್ಲಿ ಏನು ಮಾಡಿದ್ದಾರೆಂದರೆ, ಆ ಟರ್ಮ್ ಮತ್ತು ಪರ್ಟಿಕ್ಯುಲರ್ ತಾಲ್ಲೂಕಿನಲ್ಲಿ ನಾವು 35 ಸೀಟುಗಳನ್ನು ಎಸ್‌ಸಿ:ಎಸ್‌ಟಿ ಜನಾಂಗದವರಿಗೆ ರಿಸರ್ವೇಶನ್ ಕರ್ನಾಟಕದಲ್ಲಿ ಮಾಡಿದ್ದೇವೆ, ನಾಲ್ಕು ಪಾರ್ಲಿಮೆಂಟ್ ಸೀಟುಗಳನ್ನು ರಿಸರ್ವ್ ಮಾಡಿದ್ದೇವೆ, ಅದೇ ಮಾದರಿಯಲ್ಲಿ ೧೭೫ ತಾಲ್ಲೂಕು ಪಂಚಾಯಿತಿಯಲ್ಲಿ ಸುಮಾರು 75 ತಾಲ್ಲೂಕು ಪಂಚಾಯಿತಿಯಲ್ಲಿ ಎಸ್‌ಸಿ:ಎಸ್‌ಟಿಗೆ ಹೋಗುತ್ತದೆ. ಇದು 5 ವರ್ಷಕ್ಕೊಂದು ಸಾರಿ ರೊಟೇಟ್ ಆಗುತ್ತದೆ. ಆಗ ಬೇರೆಯವರು ಯಾರು ಅಧ್ಯಕ್ಷ ಸ್ಥಾನಕ್ಕೆ ಕಾಂಟೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ. ಈಗ ಏನು ಆಗಿದೆ ಎಂದರೆ, ಎಲ್ಲಾ ಸದಸ್ಯರ ಅಭಿಪ್ರಾಯವು ಅದೇ ಆಗಿದೆ, ಸದಸ್ಯರುಗಳಿಗೆ ಮತ್ತು ಅವರ ಸಲಹೆಗಳಿಗೆ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಲ್ಲಿ ಮಾನ್ಯತೆಗೆ ಮೂರು ಕಾಸಿಗೆ ಬೆಲೆ ಇಲ್ಲ. ಆ ಸಭೆಯಲ್ಲಿ ಭಾಗವಹಿಸುವಂತಹವರು, ಗೌರವ ಇರತಕ್ಕಂಥವರು ಸಭೆಗಳಿಗೆ ಹೋಗುವುದಕ್ಕೆ ಕಷ್ಟವಾಗಿದೆ. ಅಲ್ಲಿರುವ ಸಿಇಒ ಮತ್ತು ಸಿಎಒರವರುಗಳು ಏನು ಮಾಡುತ್ತಾರೆಂದರೆ ಮಾರ್ಚ್ ತಿಂಗಳಲ್ಲಿ ಅದು ದೇವರಿಗೆ ಗೊತ್ತು? ಇದರ ಬಗ್ಗೆ ನಿಮಗೂ ಸಹ ಎಲ್ಲಾ ವಿಚಾರಗಳು ಗೊತ್ತಿದೆ. ರಿವ್ಯೂ ಮಾಡುವಾಗ ನೀವು ಫ್ರೀಯಾಗಿ, ಫ್ರಾಂಕಾಗಿ ನೀವು ಏನೇನು ಎಲ್ಲಾ ಕಡೆಗಳಲ್ಲಿ ಜಿಲ್ಲಾ ವಾರ್ತೆಗಳಲ್ಲಿ ಏನೇನು ಮಾತನಾಡಿದ್ದೀರಿ ಅದನ್ನೆಲ್ಲವನ್ನೂ ನಾನು ನೋಡಿದ್ದೇನೆ. we all appreciate that, but ಸಿಸ್ಟಮ್ ಅನ್ನು ಇಂಪ್ರೂವ್‌ಮೆಂಟ್ ಮಾಡಬೇಕಾದರೆ ನಾವು ಏನಾದರೂ ಮಾಡಬೇಕಲ್ಲ? ಈಗ ಕರ್ನಾಟಕದಲ್ಲಿ ಮೆಜಾರಿಟಿ ಕಾಂಗ್ರೆಸ್ ಪಕ್ಷದವರೇ ಜಿಲ್ಲಾ ಪಂಚಾಯಿತಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರಾಗಿದ್ದಾರೆ. ಅವರೆಲ್ಲರೂ ಸಹ ಸೇರಿಕೊಂಡು ಒಂದು ಮನವಿಯನ್ನು ಕೊಟ್ಟಿದ್ದಾರೆ ಅದನ್ನು ತಾವು ಪರಿಶೀಲನೆ ಮಾಡಬಹುದಾಗಿತ್ತು. ಅಟ್‌ಲೀಸ್ಟ್ ಬೇರೆ ಪೊಲಿಟಿಕಲ್ ಪಾರ್ಟಿಸ್ ಒಪಿನಿಯನ್ ಏನು ಎಂದು ಹೇಳಿ ಎಲ್ಲಾ ವಿಚಾರದಲ್ಲೂ ನಮಗೆ ಕರೆಯುತ್ತೀರಿ, ಫ್ಲೋರ್ ಲೀಡರ್ಸ್‌ನ್ನು ಕರೆದು ಒಪಿನಿಯನ್‌ನ್ನು ತೆಗೆದುಕೊಳ್ಳಬಹುದಾಗಿತ್ತು. ಹೋಗಲಿ ಅದು ಆಗಿಲ್ಲ, at least hence forth ಸಿಸ್ಟಮ್ ಅನ್ನು ಇಂಪ್ರೂವ್‌ಮೆಂಟ್ ಮಾಡುವ ದೃಷ್ಟಿಯಿಂದಾಗಿ giving due weightage to the social justice, Why don't you better administer? ಎನ್ನತಕ್ಕಂಥದ್ದು.

ಶ್ರೀ ಬಿ.ಸೈ.ಫೂರ್ಜಡೆ: ತಮ್ಮ ಅಭಿಪ್ರಾಯವನ್ನು ನಾನು ಸ್ವಾಗತ ಮಾಡುತ್ತೇನೆ, ಸಿಸ್ಟಮ್ ಇಂಪ್ರೂವ್‌ಮೆಂಟ್‌ಗೋಸ್ಕರ ನಾವು ಏನು ಮಾಡುವುದಕ್ಕೆ ಹೊರಟಿದ್ದೇವೆ ಇದರ ಬಗ್ಗೆ ಎಲ್ಲರೂ ಸೇರಿ ಚರ್ಚೆ ಮಾಡುವುದರಲ್ಲಿ ತಪ್ಪೇನೂ ಇಲ್ಲ. ನಾನು ಅದಷ್ಟು ಬೇಗ ಇಲ್ಲಿ ಕಾಂಪ್ರಹೆನ್ಸಿವ್ ಅಮೆಂಡಮೆಂಟ್ ಅನ್ನು ಬ್ಯಾಕ್‌ಗೆ ತರುವವನಿದ್ದೇನೆ.

ಈಗಾಗಲೇ ಅದು ರೆಡಿಯಾಗಿದೆ. ಇಷ್ಟರಲ್ಲೇ ನಾವು ಸಭೆಯ ಮುಂದಿಡುತ್ತೇವೆ. ಅದನ್ನು ಇಟ್ಟ ನಂತರ ಇದರ ಬಗ್ಗೆ ನಾವು ವಿಷಯ ಸಮಿತಿ ಏನಿದೆ, ಅಲ್ಲಿ ಅವರೆಲ್ಲರನ್ನು ಕರೆದು ಅವರ ಅಭಿಪ್ರಾಯಗಳನ್ನು ಕೇಳುತ್ತೇವೆ. ಇದರಲ್ಲಿ ತಮ್ಮಂತಹ ಮುಖಂಡರೆಲ್ಲರೂ ಆಸಕ್ತಿಯನ್ನು ತೋರಿಸುವುದಾದರೆ ತಮಗೂ ಸಹ ನಾನು ಸ್ವಾಗತ ಮಾಡುತ್ತೇನೆ. ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆಯಾಗಲಿ, ಈ ಸಿಸ್ಟಮ್ ಅನ್ನು ಯಾವ ರೀತಿ ಬಲಪಡಿಸಬೇಕು. ಗ್ರಾಮಪಂಚಾಯಿತಿ ಮಟ್ಟದಲ್ಲಿ ಯಾವ ರೀತಿಯಾಗಿ ಬಲಪಡಿಸಬೇಕು, ಗ್ರಾಮಸಭೆಗಳನ್ನು ಯಾವ ರೀತಿಯಾಗಿ ಬಲಪಡಿಸಬೇಕು, ಇದರ ಬಗ್ಗೆ ಮೂಲಭೂತವಾದಂತಹ ಕೆಲವು ಬದಲಾವಣೆಗಳನ್ನು ನಾವು ಮಾಡೋಣ. ಆದರೆ ಈ ವಿಷಯವೇನಿದೆ, ರೊಟೇಷನ್ ಬಗ್ಗೆ ಏನು ಇದೆ, 5 ವರ್ಷ ಮತ್ತು 20 ತಿಂಗಳು ಇದರ ಬಗ್ಗೆಯೂ ಕೂಡ ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಎಲ್ಲಾ ಪಾರ್ಟಿಗಳ ಲೀಡರ್ಸ್‌ಗಳನ್ನು ಕರೆದು ಅದರ ಬಗ್ಗೆ ಅಭಿಪ್ರಾಯಕ್ಕೆ ಬರುವುದಕ್ಕೆ ಸಾಧ್ಯವಾದರೆ ಅದನ್ನು ಮಾಡಲಿ ಎಂದು ಹೇಳಿ ನಿಮ್ಮೆಲ್ಲರ ವತಿಯಿಂದ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ.

ಅಧ್ಯಕ್ಷರು: ಇದರ ಬಗ್ಗೆ ಮಾನ್ಯ ಮಂತ್ರಿಗಳು ಸ್ವಲ್ಪ ಬೇಗನೆ ಮಾಡಬೇಕು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು 20 ತಿಂಗಳು ಕಡಿಮೆಯಾಗುತ್ತದೆ ಅದನ್ನು ಎರಡೂರೆ ವರ್ಷ ಮಾಡಿಕೊಡಬೇಕೆಂದು ಒಪ್ಪಿಕೊಂಡರೆ ಬಹಳ ಸಂತೋಷ. ಇವತ್ತು ರಾಜ್ಯದಲ್ಲಿ ನಡೆಯುತ್ತಿರುವುದೇನೆಂದರೆ, ಅದು 5-5 ತಿಂಗಳುಗಳಿಗೆ ಇಳಿದಿದೆ. ಅದಕ್ಕೇನಾದರೂ ಕಡಿವಾಣವನ್ನು ಹಾಕುವುದಕ್ಕೆ ಸಾಧ್ಯತೆ ಇದೆಯೇ? ಇದರ ಬಗ್ಗೆ ತಾವು ಏನು ಮಾಡುತ್ತೀರಾ? ಅದರ ಬಗ್ಗೆಯೂ ತಾವು ಹೇಳಬೇಕು.

ಶ್ರೀ ಎಂ.ವೈ.ಘೋರ್ಪಡೆ: ಇದು 5-5 ತಿಂಗಳು ಕಾನೂನು ಪ್ರಕಾರ ನಡೆಯುತ್ತಿಲ್ಲ, ಇದರ ಬಗ್ಗೆ ನೀವೇ ಒಂದು ಒಪ್ಪಂದಕ್ಕೆ ಬಂದು ಮಾಡಿದರೆ ಅದಕ್ಕಾಗಿ ನಾವು ಹೊಸ ಕಾನೂನು ಮಾಡುವುದಕ್ಕೆ ಕಷ್ಟವಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಈಗ ತಾವೇನು ಅವಧಿಯನ್ನು 20 ತಿಂಗಳೆಂದು ಇಟ್ಟಿದ್ದೀರಿ ಆ 20 ತಿಂಗಳುಗಳೂ ಸಹ ನಡೆಯುತ್ತಿಲ್ಲ, ಅದು 5-5 ತಿಂಗಳುಗಳಿಗೆ ಇಳಿದಿದೆ.

ಶ್ರೀ ಕರಿಯಣ್ಣ: ಮಾನ್ಯ ಅಧ್ಯಕ್ಷರೆ, ಅವರು ರಾಜೀನಾಮೆಯನ್ನು ಕೊಟ್ಟು ವಾಲೆಂಟರಿಯಾಗಿ ಅರೇಂಜ್‌ಮೆಂಟ್‌ನ್ನು ಮಾಡಿಕೊಂಡರೆ ಏನು ಮಾಡುತ್ತೀರಿ? ಅದನ್ನೇನು ಬದಲಾವಣೆ ಮಾಡುವುದಕ್ಕೆ ಆಗುವುದಿಲ್ಲವೇ?

MR.SPEAKER: On some understanding, they give voluntary resignations.

ಶ್ರೀ ಎಸ್.ಎಸ್.ಪಾಟೀಲ್: ಅದನ್ನು ನಿಮ್ಮವರೇ, ಮಾಡುತ್ತಿದ್ದಾರೆ, ಅದು ನಿಮ್ಮವರು ಮಾಡಿ ನಮಗೆ ಅದು ಬಂದಿದೆ. 5-5 ತಿಂಗಳು ಮತ್ತು 10-10 ತಿಂಗಳು.

ಶ್ರೀ ಕರಿಯಣ್ಣ: ಅವರು ಕಾನೂನಿನ ಚೌಕಟ್ಟಿನೊಳಗಡೆ ಮಾಡಿರುತ್ತಾರಲ್ಲಾ?

ಶ್ರೀ ಎಸ್.ಎಸ್.ಪಾಟೀಲ್: ನಿಜವಾಗಿ ಅಲ್ಲಿ ಏನೂ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ತಾವೇನಾದರೂ ಕಡಿವಾಣವನ್ನು ತರಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: 72-73 ಅಮೆಂಡ್‌ಮೆಂಟ್ ಆದ ನಂತರದಲ್ಲಿ ಸ್ಟೇಟ್ ಎಲೆಕ್ಷನ್ ಕಮಿಷನ್ ಎಂದು ಒಂದು ಸಂಸ್ಥೆಯನ್ನು ನಾವು ಫಾರ್ಮ್ ಮಾಡಿಕೊಂಡಿದ್ದೇವೆ. ಈ ನಮ್ಮ ಚರ್ಚೆ ಮತ್ತು ಸಂವಾದ ಎಲ್ಲಾ ಒಂದು ನಿರ್ಣಯಕ್ಕೆ ಬರುವ ಮೊದಲು ರಾಜ್ಯ ಚುನಾವಣಾ ಆಯೋಗ ಇದೆಯಲ್ಲಾ ಅದರದು ಒಂದು ಪಾತ್ರ ಪ್ರಮುಖವಾಗಿರುವುದರಿಂದ ಈ ರಿಸರ್ವೇಶನ್ ಮತ್ತು ಇತ್ಯಾದಿಗಳದ್ದು ಡಿಸೈಡ್ ಮಾಡುವಾಗ ಅವರದು ನಾವು ಒಟ್ಟಾಗಿ ನಿರ್ಣಯಕ್ಕೆ ಬರಬೇಕಾದ ಅಗತ್ಯವಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ.ವೈ.ಘೋರ್ಪಡೆ: ಇದು ರಿಸರ್ವೇಶನ್‌ಗೆ ಸಂಬಂಧಪಟ್ಟಿದ್ದಲ್ಲ. ಆಡಳಿತ ಸುಧಾರಣಾ ಆಯೋಗಕ್ಕೂ ರಿಸರ್ವೇಶನ್‌ಗೂ ಯಾವುದೇ ಸಂಬಂಧವಿಲ್ಲ. ಅವರು ಮಾಡಿರತಕ್ಕಂಥ ಶಿಫಾರಸ್ಸು ಈ 20 ತಿಂಗಳುಗಳ ಅವಧಿ ಏನು ಇದೆ, ಅದರ ಬಗ್ಗೆ ಮಾಡಿದ್ದಾರೆ. ಅದು 30 ತಿಂಗಳುಗಳಾಗಲಿ ಎಂದು ಮಾಡಿದ್ದಾರೆ, ಇದು ಅಷ್ಟಕ್ಕೆ ಸೀಮಿತವಾಗಿದೆ.

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ಈ ಒಂದು ವ್ಯವಸ್ಥೆಯನ್ನು ಯಾವ ಉದ್ದೇಶದಿಂದ ನಾವು ಮಾಡಿದ್ದೇವೋ, ಆ ಉದ್ದೇಶದ ಪ್ರಕಾರ ನಡೆಯುತ್ತಿಲ್ಲ. ಇದರ ಬಗ್ಗೆ ಪುನರ್ ಪರಿಶೀಲನೆ ಆಗಬೇಕು, ಮನುಷ್ಯನ ಗುಣಗಳು ಸಂದರ್ಭಕ್ಕೆ ಅನುಸಾರವಾಗಿ ಹೇಗೆ ಬದಲಾವಣೆಗಳಾಗುತ್ತವೆಯೋ ಹಾಗೆಯೇ ಸಂಸ್ಥೆಗಳು ಕೂಡ ಬದಲಾವಣೆಗಳಾಗಿವೆ. ಇದಕ್ಕೆ ಹೊಡೆತ ಬಿದ್ದಿದೆ, ಇದಕ್ಕೆ ಪೆಟ್ಟು ಬಿದ್ದಿದೆ, ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ಈ ಬಗ್ಗೆ ಪುನರ್‌ಪರಿಶೀಲನೆಯನ್ನು ಮಾಡಬೇಕು, ಒಂದು ಆಯೋಗವನ್ನು ರಚನೆ ಮಾಡಿ ಈ ಹೋಲ್ ಸಿಸ್ಟಮ್‌ನ್ನೂ ಕೂಡ ಎಕ್ಸಾಮಿನ್ ಮಾಡಿ ತರದಿದ್ದರೆ ಇಲ್ಲಿ ವ್ಯವಸ್ಥೆನೇ ಹೋಗುತ್ತದೆ. ಪ್ರಜಾಪ್ರಭುತ್ವದ ಅಡಿನಲ್ಲೆ ಹೋಗುತ್ತದೆ ಎಂದು ನಾನು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ. Kindly examine the entire system in view of the present

experience. Will the Hon'ble Minister kindly assure to this House?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಆ್ಯಂಟಿ ಡಿಪೆಕ್ಷನ್‌ಗೆ ಅಮೆಂಡ್‌ಮೆಂಟ್‌ನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿ.

ಅಧ್ಯಕ್ಷರು: ಮಾನ್ಯ ಫೋರ್ಡ್‌ಡೆಯವರೆ, ತಾವೇನಾದರೂ ಇದಕ್ಕೆ ಸಂಬಂಧಪಟ್ಟ ಹಾಗೆ ಉತ್ತರವನ್ನು ಹೇಳುತ್ತೀರಾ?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಆ್ಯಂಟಿ ಡಿಪೆಕ್ಷನ್ ಆ್ಯಕ್ಟ್‌ಗೆ ತಿದ್ದುಪಡಿಯನ್ನು ತಂದು ಈ ಸಂಸ್ಥೆಗಳನ್ನು ಸ್ಟ್ರಾಂಗ್ ಮಾಡಿ.

ಶ್ರೀ ಎ.ಎಸ್.ಗುರುಸ್ವಾಮಿ: ಅಷ್ಟೇ ಅಲ್ಲ ಸಾರ್, ವ್ಯವಸ್ಥೆ ಬಗ್ಗೆ ಪರಿಶೀಲನೆಯಾಗಬೇಕು.

ಅಧ್ಯಕ್ಷರು: ಮಾನ್ಯ ಸಚಿವರು ಎಕ್ಸಾಮಿನ್ ಮಾಡುತ್ತೇನೆಂದು ಹೇಳಿದ್ದೀರಲ್ಲಾ.

ಶ್ರೀ ಎ.ಎಸ್.ಗುರುಸ್ವಾಮಿ: ಈ ವ್ಯವಸ್ಥೆಯ ಬಗ್ಗೆ ಪುನರ್‌ಪರಿಶೀಲನೆಯಾಗಬೇಕು.

ಅಧ್ಯಕ್ಷರು: ವಿರೋಧಪಕ್ಷದ ನಾಯಕರನ್ನು ಕರೆಸಿ ಮಾತನಾಡುತ್ತೇನೆಂದು ಹೇಳಿದ್ದಾರಲ್ಲಾ.

ಶ್ರೀ ಎ.ಎಸ್.ಗುರುಸ್ವಾಮಿ: ನಮ್ಮನ್ನು ಕರೆಸಿ ಮಾತನಾಡಿದರೆ ಒಳ್ಳೆಯದಲ್ಲವೇ?

ಅಧ್ಯಕ್ಷರು: ನೀವೂ ಬನ್ನಿ.

ಶ್ರೀ ಎಸ್.ಗುರುಸ್ವಾಮಿ: ಅವರು ನಮ್ಮನ್ನು ಕರೆದರೆ ತಾನೇ ಬರುವುದಕ್ಕೆ ಸಾಧ್ಯ?

ಶ್ರೀ ಹೆಚ್.ಎಸ್.ಮಹದೇವಪ್ರಸಾದ್: ಅವರು ಬಹಳ ಹಿಂದೆ ಇದ್ದರು ಈಗ ಅವರು ಎರಡು ರೋ ಮುಂದೆ ಬಂದಿದ್ದಾರೆ.

ಮುಚ್ಚುತ್ತಿರುವ ಶಾಲೆಗಳನ್ನು ಪುನಃ ಪ್ರಾರಂಭ ಮಾಡುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 94(1354)

ಸದಸ್ಯರ ಹೆಸರು: ಶ್ರೀ ಕರಿಯಣ್ಣ(ಹೊಳೆಹೊನ್ನೂರು)

ಉತ್ತರಿಸುವ ಸಚಿವರು: ಶ್ರೀ ಹೆಚ್.ವಿಶ್ವನಾಥ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ